# “ಹೋಮಿಯೋಕೇರ್ ಇಂಟರ್‌ನ್ಯಾಷನಲ್ ಬಳಿ ಥೈರಾಯ್ಡ್ ಸಮಸ್ಯೆಗಳನ್ನು ನಿವಾರಿಸುವ ಪರಿಹಾರ ಲಭ್ಯವಿದೆ”

**ಡಾ. ಶ್ರೀಕಾಂತ್ ಮೋರ್ಲಾವರ್**
ಸಿಎಂಡಿ
ಹೋಮಿಯೊಕೇರ್ ಇಂಟರ್‌ನ್ಯಾಷನಲ್



ಆಧುನಿಕ ಧಾವಂತಭರಿತ ಜೀವನಶೈಲಿಯಲ್ಲಿನ ಅನಾರೋಗ್ಯಕರ ಆಹಾರ ಕ್ರಮ, ಅಧಿಕ ಒತ್ತಡ ಮತ್ತು ಸೂಕ್ತ ವ್ಯಾಯಾಮದ ಕೊರತೆಯಂತಹ ಸಾಕಷ್ಟು ಕಾರಣಗಳಿಂದಾಗಿ ಥೈರಾಯ್ಡ್ ಸಮಸ್ಯೆಗಳು ಉಂಟಾಗುತ್ತಿವೆ. ಸಾಮಾನ್ಯವಾಗಿ ಇನ್ನಿತರೆ ಮಾದರಿಯ ಚಿಕಿತ್ಸೆಗಳಲ್ಲಿ ಥೈರಾಯ್ಡ್ ಸಮಸ್ಯೆಗಳಿಗೆ ನಿಯಮಿತ ಹಾರ್ಮೋನ್ ಪೂರಕಗಳನ್ನು ಸೂಚಿಸುವುದರ ಹೊರತಾಗಿ, ಆಳವಾದ ಚಿಕಿತ್ಸೆ ನೀಡಲಾಗುವುದಿಲ್ಲ. ಆದರೆ ಹೋಮಿಯೋಪತಿಯಲ್ಲಿ ಥೈರಾಯ್ಡ್‌ನ್ನು ಸಂಪೂರ್ಣವಾಗಿ ಗುಣಪಡಿಸಬಹುದು.

## ಥೈರಾಯ್ಡ್ ಸಮಸ್ಯೆ ಎಂದರೇನು ಮತ್ತು ಹಾರ್ಮೋನ್ ಅಸಮತೋಲನಕ್ಕೆ ಕಾರಣವೇನು?

ಮನುಷ್ಯನ ಶರೀರದಲ್ಲಿರುವ ವಿವಿಧ ಗ್ರಂಥಿಗಳಲ್ಲಿನ ಒಂದು ಪ್ರಮುಖ ಗ್ರಂಥಿಗೆ ಥೈರಾಯ್ಡ್ ಎನ್ನಲಾಗುತ್ತದೆ. ಈ ಗ್ರಂಥಿಯು ಟಿ3 ಮತ್ತು ಟಿ4 ಹಾರ್ಮೋನ್‌ಗಳನ್ನು ಸ್ರವಿಸುತ್ತದೆ. ಹೀಗೆ ರಕ್ತ ಪರಿಚಲನೆಯಲ್ಲಿ ಸ್ರವಿಸಲ್ಪಡುವ ಈ ಹಾರ್ಮೋನ್‌ಗಳು ಶರೀರದಾದ್ಯಂತ ಪಸರಿಸಲ್ಪಡುತ್ತವೆ ಹಾಗೂ ಇವುಗಳು ದೇಹದ ಇತರೆ ಮೆಟಬಲಿಸಂ ಕ್ರಿಯೆಗಳನ್ನು ನಿಯಂತ್ರಿಸುವುದರ ಜೊತೆಗೆ ದೈಹಿಕ ಬೆಳವಣಿಗೆಯನ್ನು ಕೂಡ ಸುಧಾರಿಸುತ್ತವೆ. ಸಾಕಷ್ಟು ಹಾರ್ಮೋನ್‌ಗಳನ್ನು ನಿರ್ವಹಿಸುವಲ್ಲಿ ಶರೀರದ ವ್ಯವಸ್ಥೆಯು ವಿಫಲವಾದಲ್ಲಿ, ಥೈರಾಯ್ಡ್ ಹಾರ್ಮೋನ್‌ಗಳ ಅಲ್ಪ ಅಥವಾ ಅಧಿಕ ಉತ್ಪಾದನೆಯಂತಹ ಸಮಸ್ಯೆಗಳು ಗೋಚರಿಸುತ್ತವೆ. ಅಯೋಡೈನ್ ಕೊರತೆಯಿಂದಾಗಿ, ಥೈರಾಯ್ಡ್ ಗ್ರಂಥಿಯನ್ನು ತೆಗೆಯುವುದರಿಂದಾಗಿ, ಪಿಟ್ಯುಟರಿ ಗ್ರಂಥಿಯ ದೋಷಪೂರಿತ ಕ್ರಿಯೆಗಳಿಂದಾಗಿ, ಅನುವಂಶಿಕ ಅಸ್ವಸ್ಥೆಗಳಿಂದಾಗಿ ಕೂಡ ಈ ಸಮಸ್ಯೆಗಳು ಉದ್ಭವಿಸುತ್ತವೆ.

## ಹೈಪೊಥೈರಾಯ್ಡಿಸಮ್:

ಹೈಪೊಥೈರಾಯ್ಡಿಸಮ್ ಎಂಬುದು ಒಂದು ಸ್ಥಿತಿಯಾಗಿದ್ದು, ಈ ಸ್ಥಿತಿಯಲ್ಲಿ ಥೈರಾಯ್ಡ್ ಗ್ರಂಥಿಯು ಸಮರ್ಪಕ ಪ್ರಮಾಣದ ಥೈರಾಯ್ಡ್ ಹಾರ್ಮೋನ್‌ಗಳನ್ನು ಸ್ರವಿಸುವುದಿಲ್ಲ. ಇದು ಸಾಮಾನ್ಯವಾಗಿ ಮಕ್ಕಳು ಮತ್ತು ಮಹಿಳೆಯರಲ್ಲಿ ಹೆಚ್ಚಾಗಿ ಗೋಚರಿಸುತ್ತದೆ.

ಲಕ್ಷಣಗಳು: ಮಕ್ಕಳಲ್ಲಿ – ಮಲಬದ್ಧತೆ, ಬೌದ್ಧಿಕ ಅಸಾಮರ್ಥ್ಯತೆ, ಮಂದಗತಿ ಬೆಳವಣಿಗೆ, ನಿಷ್ಕ್ರಿಯತೆ ಇತ್ಯಾದಿ. ವಯಸ್ಕರಲ್ಲಿ – ಅಧಿಕ ತೂಕ, ಋತುಚಕ್ರ ಅವಧಿಗಳಲ್ಲಿ ಸಹಜತೆಗಿಂತ ಭಾರಿ ವ್ಯತ್ಯಯ ಅಥವಾ ಅನಿಯಮಿತತೆ, ತಂಪು ಸಹಿಸದಿರುವುದು, ಶುಷ್ಕ ತ್ವಚೆ, ವಿಳಂಬವಾಗಿ ಮೈನೆರೆಯುವುದು, ಬಂಜೆತನ, ಸ್ನಾಯುಗಳ ನೋವು, ಕೀಲುಗಳ ನೋವು ಇತ್ಯಾದಿ.



## ಹೈಪರ್‌ಥೈರಾಯ್ಡಿಸಮ್:

ಹೈಪರ್‌ಥೈರಾಯ್ಡಿಸಮ್ ಎಂಬುದು ಒಂದು ಸ್ಥಿತಿಯಾಗಿದ್ದು, ಈ ಸ್ಥಿತಿಯಲ್ಲಿ ಥೈರಾಯ್ಡ್ ಗ್ರಂಥಿಯು ಅಧಿಕ ಥೈರಾಯ್ಡ್ ಹಾರ್ಮೋನ್‌ಗಳನ್ನು ಸ್ರವಿಸುತ್ತದೆ.

ಲಕ್ಷಣಗಳು: ಉತ್ತಮ ಆಹಾರ ಶೈಲಿ ಹೊಂದಿದ್ದರೂ ತೂಕ ಹಾನಿ ಉಂಟಾಗುವುದು, ಅಧಿಕ ಬೆವರುವಿಕೆ, ಶಾಖ ಸಹಿಸದಿರುವುದು, ಡಯೇರಿಯಾ, ಹಗುರ ಋತುಚಕ್ರ ಅವಧಿಗಳು, ಟ್ರೆಮರ್ಸ್/ಶೇಕ್‌ನೆಸ್, ಬಂಜೆತನ, ಕೂದಲು ಉದುರುವಿಕೆ, ತ್ವಚೆಯ ಸಮಸ್ಯೆಗಳು ಇತ್ಯಾದಿ.

## ಗಾಯ್ಟರ್:

ಕತ್ತಿನ ಭಾಗದಲ್ಲಿರುವ ಥೈರಾಯ್ಡ್ ಗ್ರಂಥಿಯು ಅಸಹಜವಾಗಿ ಊದಿಕೊಳ್ಳುವುದರಿಂದ ಗಾಯ್ಟರ್ ಸಮಸ್ಯೆಗೆ ಕಾರಣವಾಗುತ್ತದೆ. ಅಯೋಡೈನ್ ಕೊರತೆಯೇ ಈ ಗಾಯ್ಟರ್‌ನ ಮೂಲ ಕಾರಣವಾಗಿರುತ್ತದೆ.

ಲಕ್ಷಣಗಳು: ಕತ್ತಿನ ಭಾಗದಲ್ಲಿ ಊತ ಗೋಚರಿಸುವುದು, ಉಸಿರಾಡುವಾಗ ಮತ್ತು ಆಹಾರ ನುಂಗುವಾಗ ತೊಂದರೆ ಉಂಟಾಗುವುದು, ಧ್ವನಿ ಬದಲಾಗುವುದು ಇತ್ಯಾದಿ.

## ತಪಾಸಣಾ ಪರೀಕ್ಷೆಗಳು:

ಥೈರಾಯ್ಡ್ ಪ್ರೊಫೈಲ್ - ಟಿ3, ಟಿ4, ಟಿಎಸ್‌ಹೆಚ್, ಆ್ಯಂಟಿಥೈರಾಯ್ಡ್ ಆ್ಯಂಟಿಬಾಡೀಸ್, ಥೈರಾಯ್ಡ್ ಗ್ಲಾಂಡ್‌ನ ಯುಎಸ್‌ಜಿ, ಗಂಟಲಿನ ಸಿ ಟಿ ಸ್ಕ್ಯಾನ್.

**ಹೋಮಿಯೋಕೇರ್ ಇಂಟರ್‌ನ್ಯಾಷನಲ್ ಚಿಕಿತ್ಸೆ:** ಥೈರಾಯ್ಡ್ ಕಾಯಿಲೆಗಳಿಗೆ ನೀಡಲಾಗುವ ಸಾಂಪ್ರದಾಯಿಕ ಚಿಕಿತ್ಸೆಯಲ್ಲಿ ಜೀವನಪರ್ಯಂತ ಔಷಧಿ ಸೇವನೆಗೆ ಸೂಚನೆ ಅಥವಾ ಯಾತನಾದಾಯಕ ಪ್ರಕ್ರಿಯೆಗಳು ಅಡಕಗೊಂಡಿದ್ದು, ಇವುಗಳಲ್ಲಿ ಕೇವಲ ಹಾರ್ಮೋನ್ ಪೂರಕಗಳು ಮಾತ್ರ ಒಳಗೊಂಡಿರುತ್ತವೆ. ಥೈರಾಯ್ಡ್ ಹಾರ್ಮೋನ್‌ಗಳನ್ನು ಸಮತೋಲನಗೊಳಿಸಲು ಹೋಮಿಯೋಕೇರ್ ಇಂಟರ್‌ನ್ಯಾಷನಲ್‌ನ ಜೆನೆಟಿಕ್ ಕಾನ್‌ಸ್ಟಿಟ್ಯೂಷನಲ್ ಚಿಕಿತ್ಸೆಯಲ್ಲಿ, ರೋಗಿಯ ದೈಹಿಕ ಸ್ಥಿತಿಗತಿಗಳನ್ನು ಪರಿಗಣಿಸಲಾಗುತ್ತದೆ ಮತ್ತು ಪರಿಣಾಮಕಾರಿಯಾಗಿ ನಿವಾರಿಸಲಾಗುತ್ತದೆ.

HOMEOCARE INTERNATIONAL
ಹೋಮಿಯೋಕೇರ್® ಇಂಟರ್‌ನ್ಯಾಷನಲ್
ವರ್ಲ್ಡ್-ಕ್ಲಾಸ್ ಹೋಮಿಯೋಪತಿ

ಶುಲ್ಕ ರಹಿತ 1800 108 1212
ಉಚಿತ ಸಮಾಲೋಚನೆ 955 000 1133
www.homeocare.in